ನೈತಿಕ ಅಧಃಪತನವೇ ಇದಕ್ಕೆಲ್ಲ ಕಾರಣ ಎಂಬ ಸಾರ್ವಕಾಲಿಕ ಸತ್ಯ ನಮ್ಮ ಕಣ್ಣೆದುರಾಗುತ್ತದೆ. ಇನ್ನು ಸಮಾಜವೆಂಬ ಆಳವಾದ ಸಾಗರಕ್ಕೆ ಇಳಿದರೆ ಇಂತಹ ಅನೇಕ ಭೀಕರ ವಾಸ್ತವಾಂಶಗಳು ಕಂಡುಬಂದು ಅವು ನಮ್ಮನ್ನು ಚಕಿತಗೊಳಿಸುತ್ತವೆ. ಆದರೆ ಇಂತಹ ವಿಷಯಗಳು ಉನ್ಮಾದವನ್ನು ಉಂಟುಮಾಡುವುದಕ್ಕೆ ಆಹಾರವಾಗುತ್ತವೆಯೇ ಹೊರತು, ಸಮಾಜಮುಖಿಯಾದ ಉದ್ದೇಶಗಳು ಇವುಗಳಿಂದ ಈಡೇರುವುದು ತೀರ ವಿರಳ. ಅದಕ್ಕೆ ಕಾರಣ ನೈತಿಕ ಶಿಕ್ಷಣದ ಕೊರತೆ.

ಈ ಜಗತ್ತಿಗೆ ನಮ್ಮನ್ನು ಪರಿಚಯಿಸಿದ ತಂದೆತಾಯಂದಿರನ್ನು ಮನೆಯಿಂದಲೇ ಗಡೀಪಾರು ಮಾಡುವ ಹೀನಕೃತ್ಯಗಳು, ದಿನನಿತ್ಯವೂ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವ ವಿಚಿತ್ರ ವಿಕೃತ ಪ್ರಕರಣಗಳು, ಸಂಯಮದ ಎಲ್ಲೆಯನ್ನು ಮೀರುತ್ತಿರುವ ಇಂದಿನ ಬಿಸಿ ರಕ್ತದ ತರುಣರ ಅಸಭ್ಯ ವರ್ತನೆಗಳು – ಹೀಗೆ ನಮ್ಮ ಅರಿವಿಗೆ ಬರುವ ಹಲವಾರು ಅಂಶಗಳು ಅಚ್ಚರಿ ಎಂಬ ಭಾವನೆಯ ಗೀಟುಗಳನ್ನು ಹೃದಯದ ಗೋಡೆಯ ಮೇಲೆ ಮೂಡಿಸುತ್ತವೆ. ಸುಮಾರು ೧೫೦೦ ವರ್ಷಗಳ ಹಿಂದೆ ಪ್ರವಾದಿ ಮಹ್ಮದ್ ಪೈಗಂಬರ್, "ಜಗತ್ತಿನಲ್ಲಿ ಒಂದು ಕಾಲ ಬರುತ್ತದೆ. ಆ ಸಂದರ್ಭದಲ್ಲಿ ನೀವು ಊಹಿಸಿಕೊಳ್ಳಲೂ ಸಾಧ್ಯವಾಗದ ಅಚ್ಚರಿಯ ಅಂಶಗಳನ್ನು ಕಾಣುತ್ತೀರಿ" ಎಂದು ಭವಿಷ್ಯವಾಣಿ ನುಡಿದಿದ್ದರು. ಅವರ ಹೇಳಿಕೆ ಇಂದಿಗೂ ಪ್ರಸ್ತುತ. ನಮ್ಮ ಸಮಾಜದಲ್ಲಿ ಈಗ ಸಂಭವಿಸುತ್ತಿರುವ ಘಟನೆಗಳಿಗೆ ತಾಳೆ ಹಾಕಿ ನೋಡಿದರೆ, ಪ್ರವಾದಿಯವರ ಹೇಳಿಕೆಯಲ್ಲಿ ನೂರಕ್ಕೆ ನೂರರಷ್ಟು ಸತ್ಯಾಂಶವಿದೆ ಎಂದು ವೇದ್ಯವಾಗುತ್ತದೆ.

ಶಿಕ್ಷಣತಜ್ಞರೊಬ್ಬರನ್ನು ಶಿಕ್ಷಣದ ಕುರಿತು ವಿಶ್ಲೇಷಿಸಿ ಎಂದು ಕೇಳಿಕೊಂಡಾಗ, "ಪ್ರಾಣಿರೂಪದ ಮಾನವನನ್ನು ಮಾನವತ್ವದೆಡೆಗೆ ಒಯ್ಯುವ ಸಾಧನವೇ ಶಿಕ್ಷಣ" ಎಂದು ಉತ್ತರಿಸಿದರಂತೆ. ಆದರೆ ಶಿಕ್ಷಣ ಪಡೆದ ಅದೆಷ್ಟೋ ಮಾನವಪ್ರಾಣಿಗಳು ಇನ್ನೂ ಮಾನವರಾಗಿಲ್ಲ. ಶಿಕ್ಷಿತ ಮಾನವಪ್ರಾಣಿಗಳು ಇದ್ದಾರೆ ಎನ್ನಬೇಕಷ್ಟೆ. ಆದರೆ ಇಂದು ಪ್ರಾಣಿಗಳೇ ಮಾನವೀಯತೆಯನ್ನು ಮೆರೆದು ಮಾನವನಿಗೆ ನಾಚಿಕೆ ಬರುವಂತೆ ಮಾಡುತ್ತಿವೆ. ಇದು ಎಷ್ಟು ಹಾಸ್ಯಾಸ್ಪದ ಅಲ್ಲವೇ? ಇದು, ಮಾನವ ತನ್ನ ದೋಷವನ್ನು ತಿದ್ದಿಕೊಳ್ಳಲು ಮೂಕಪ್ರಾಣಿಗಳು ನೀಡುತ್ತಿರುವ ಪರೋಕ್ಷ ಸಂದೇಶವೂ ಹೌದು.

**'ಪರಿವರ್ತನೆಯ ಪ್ರಕ್ರಿಯೆ'** ಎಂಬ ಒಂದೇ ವಾಕ್ಯದಲ್ಲಿ ಶಿಕ್ಷಣದ ಉದ್ದೇಶವನ್ನು ಹೇಳಿಬಿಡಬಹುದು. ಪರಿವರ್ತನೆಯೇ ಶಿಕ್ಷಣದ ಮೂಲೋದ್ದೇಶವಾಗಿದೆ. ಅದು ತಕ್ಷಣ ಫಲಿಸುವುದಲ್ಲ, ದೀರ್ಘಕಾಲೀನ ಚಟುವಟಿಕೆ. **'ಸಮಾಜ ನಿಂತ ನೀರಲ್ಲ, ಸದಾ ಹರಿಯುತ್ತಿರುವ ನೀರು.'** ಜಾಗತೀಕರಣದ ಹಿನ್ನೆಲೆಯಲ್ಲಿರುವ ಇಂದಿನ ಗತಿಶೀಲ ಸಮಾಜಕ್ಕೆ ಹೊಂದಿಕೊಳ್ಳುವಂಥ ಕ್ರಿಯಾಶೀಲ ಶಿಕ್ಷಣ ಪದ್ಧತಿಯ ಆವಶ್ಯಕತೆ ನಮಗಿದೆ. ರಾಜ್ಯ ಪಠ್ಯಕ್ರಮವಾಗಲಿ ಅಥವಾ ರಾಷ್ಟ್ರೀಯ ಪಠ್ಯಕ್ರಮವಾಗಲಿ, ಪ್ರಬುದ್ಧ ವಿದ್ಯಾರ್ಥಿಗಳನ್ನು ಅಣಿಗೊಳಿಸುವ ಪ್ರಯತ್ನ ಅವುಗಳಲ್ಲಿ ಅಡಕವಾಗಿರಬೇಕು. ದೇಶಪ್ರೇಮ ಮತ್ತು ನೈತಿಕತೆ ವಿದ್ಯಾರ್ಥಿಗಳಲ್ಲಿ ಬೇರೂರುವಂಥ ರೀತಿಯಲ್ಲಿ ಪಾಠಗಳಿರಬೇಕು. ಹಾಗೂ ನಮ್ಮಲ್ಲಿ ಶಾಲೆಗಳ, ಶಿಕ್ಷಕರ ಕೊರತೆ ಇನ್ನೂ ಇದೆ. 'ಸರ್ವಶಿಕ್ಷಣ ಅಭಿಯಾನ' ಜಾರಿಯಲ್ಲಿದ್ದರೂ ಸಹ ಇಂತಹ ಸಮಸ್ಯೆಯನ್ನು ನಾವು ಎದುರಿಸುತ್ತಿರುವುದು ವಿಪರ್ಯಾಸ. ಈಗಲೂ ಶೇ. ೨೦ ರಷ್ಟು ಶಾಲೆಗಳಲ್ಲಿ ಒಬ್ಬರೇ ಶಿಕ್ಷಕರಿದ್ದಾರೆ. ವಿಶ್ವ ಬ್ಯಾಂಕ್ ವರದಿಯಂತೆ ಭಾರತದ ಶೇ. ೨೫ರಷ್ಟು ಶಿಕ್ಷಕರು ಗೈರುಹಾಜರಿ ಇರುತ್ತಾರೆ. ಇಂತಹ ಸನ್ನಿವೇಶದಲ್ಲಿ ಶೈಕ್ಷಣಿಕ ಅಭಿವೃದ್ಧಿ ಹೇಗೆ ತಾನೇ ಸಾಧ್ಯ ?

ಆರ್ಥಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ – ಹೀಗೆ ಎಲ್ಲ ಕ್ಷೇತ್ರಗಳನ್ನೂ ಶಿಕ್ಷಣ ನೀಡುವ ಶಕ್ತಿಯಿಂದ ಸುಧಾರಿಸಿ ಸ್ಪರ್ಧಾತ್ಮಕ ಜಗತ್ತಿನಲ್ಲಿ ಬಲಿಷ್ಠ ರಾಷ್ಟ್ರವಾಗುವ ಮಹೋನ್ನತ ಜವಾಬ್ದಾರಿ ಭಾರತದ ಮೇಲೆ ಇಂದು ಇದೆ. ನಿಸ್ತೇಜಕ ಮಾನವ ಸಂಪನ್ಮೂಲವನ್ನು ಕ್ರಿಯಾಶೀಲಗೊಳಿಸಲು ಭಾರತವು ಶಿಕ್ಷಣದ ಅಸ್ತ್ರವನ್ನು ಇಂದು ಬಳಸಲೇಬೇಕಾಗಿದೆ.

ಇಂತಹ ಅಭಿವೃದ್ಧಿಪೂರಕ ಯೋಜನೆಗಳನ್ನು ಮಾಡುತ್ತಿರುವಾಗ ಕೆಲವು ಗೊಂದಲಗಳು ಕಾಡುತ್ತವೆ. ಸದ್ಯ ಭಾರತದಲ್ಲಿ ಇರುವ ಅನಕ್ಷರತೆಗೆ ಕಾರಣವೇನೆಂದು ಅದರ ಮೂಲಜಾಡನ್ನು ಹುಡುಕುತ್ತಾ ಹೋದರೆ, ಸಮಂಜಸವಾದ ಉತ್ತರ ಸಿಗುವುದಿಲ್ಲ. ಬಡತನದಿಂದ ಶಿಕ್ಷಣ ಪಡೆಯಲಾಗಲಿಲ್ಲ ಎಂದಿಟ್ಟುಕೊಳ್ಳೋಣ. ಆಗ 'ಬಡತನದಿಂದ ಅನಕ್ಷರತೆ' ಎಂದೆನಿಸುತ್ತದೆ. ಅನಕ್ಷರತೆಯ ಕಾರಣದಿಂದ ವ್ಯಕ್ತಿಯೊಬ್ಬ ಸರಿಯಾದ ಉದ್ಯೋಗವನ್ನು ಪಡೆಯಲು ವಿಫಲನಾಗುತ್ತಾನೆ. ಇದರಿಂದ ಬಡತನ ಅವನನ್ನು ಕಾಡುತ್ತದೆ ಎಂದುಕೊಂಡರೆ 'ಅನಕ್ಷರತೆಯಿಂದ ಬಡತನ' ಎಂದೆನಿಸುತ್ತದೆ. ಬಡತನದಿಂದ ಅನಕ್ಷರತೆಯೋ ಅಥವಾ ಅನಕ್ಷರತೆಯೇ ಬಡತನಕ್ಕೆ ಕಾರಣವಾಯಿತೋ ಎಂಬ ಯಕ್ಷಪ್ರಶ್ನೆ ಎಂದೆಂದಿಗೂ ಬೇತಾಳದಂತೆ ಹೀಗೆ ನಮ್ಮ ಬೆನ್ನುಬಿದ್ದಿರುತ್ತದೆ. ಇದಕ್ಕೆ ತೃಪ್ತಿದಾಯಕ ಉತ್ತರ ಸಿಗುವುದು ಕಷ್ಟಸಾಧ್ಯ.

ಏನೇ ಇರಲಿ, ಶಿಕ್ಷಣದಿಂದ ಮಾತ್ರವೇ ನಮ್ಮ ದೇಶದ ಸರ್ವಾಂಗೀಣ ಪ್ರಗತಿ ಸಾಧ್ಯ. ಆದರೆ ಎಂತಹ ಶಿಕ್ಷಣ ನಮಗೆ ಬೇಕು ಎನ್ನುವುದನ್ನು ಮೊದಲು ನಿರ್ಧರಿಸಿಕೊಳ್ಳಬೇಕು. ಇದೇ ನಮ್ಮ ನಿಮ್ಮೆಲ್ಲರ ಮುಂದಿರುವ ಬಹುಮುಖ್ಯ ಸವಾಲು. ಈ ನಿಟ್ಟಿನಲ್ಲಿ ಸ್ವಾಮಿ ವಿವೇಕಾನಂದರ ಕೆಳಗಿನ ಮಾತುಗಳು ನಮಗೆ ದಾರಿದೀಪವಾಗಬಬಲ್ಲವು:

"ಶಿಕ್ಷಣವೆಂದರೆ ನಿಮ್ಮ ಮಿದುಳಿನಲ್ಲಿ ತುಂಬಿಕೊಂಡಿರುವ ಮಾಹಿತಿಯ ಮೊತ್ತವಲ್ಲ. ಅದು ನಿಮ್ಮ ಜೀವನದುದ್ದಕ್ಕೂ, ಅಜೀರ್ಣವಾಗಿ ಅಲ್ಲಿದ್ದುಕೊಂಡು ಕೊಳೆಯುತ್ತಿರುತ್ತದೆ. ನಮಗೆ ಬೇಕಾದ್ದು ಜೀವನನಿರ್ಮಾಣ, ಮನುಷ್ಯನಿರ್ಮಾಣ, ಚಾರಿತ್ರ್ಯ ನಿರ್ಮಾಣ. ಆ ಮೂಲಕ ಉದಾತ್ತ ಭಾವನೆಗಳನ್ನು ಕರಗತ ಮಾಡಿಕೊಳ್ಳಬೇಕು. ನೀವು ಐದೇ ಐದು ಭಾವನೆಗಳನ್ನು ಅರಗಿಸಿಕೊಂಡು, ಅದನ್ನು ನಿಮ್ಮ ಬದುಕನ್ನಾಗಿ ಮತ್ತು ಚಾರಿತ್ರ್ಯವನ್ನಾಗಿ ಮಾಡಿಕೊಂಡರೆ, ಇಡೀ ಗ್ರಂಥಾಲಯವನ್ನೇ ಬಾಯಿಪಾಠ ಮಾಡಿದ ಯಾವುದೇ ವ್ಯಕ್ತಿಗಿಂತ ಎಷ್ಟೋ ಹೆಚ್ಚು ಶಿಕ್ಷಣವನ್ನು ನೀವು ಪಡೆದುಕೊಳ್ಳುತ್ತೀರಿ." ⌘